

ಕರ್ನಾಟಕದ ನದಿ ನಕಾಶೆಯಲ್ಲಿ ಕಾಣಿಸುವ ಜಯಮಂಗಲಿ ಹಾಗೂ ಉತ್ತರ ಪಿನಾಕಿನಿ ನದಿಗಳು ಈ ತಲೆಮಾರಿನ ಜನರಿಗೆ ಅಸ್ಥಿಪಂಜರದ ರೂಪದಲ್ಲಷ್ಟೇ ಈವರೆಗೆ ಪರಿಚಿತವಾಗಿದ್ದವು. ಒಂದು ಕಾಲದಲ್ಲಿ ಮಳೆಗಾಲದಲ್ಲಿ ಮೈದುಂಬಿಕೊಂಡು ತಿಂಗಳುಗಟ್ಟಲೆ ಹರಿಯುವ ಮೂಲಕ, ತಮ್ಮ ಹರಿವಿನುದ್ದಕ್ಕೂ ಹಸಿರ ಚಿತ್ತಾರವನ್ನು ಬರೆಯುತ್ತಿದ್ದ ನದಿಗಳು, ಮಳೆಚಕ್ರದಲ್ಲಿ ಏರುಪೇರಾದಂತೆ ಅಪೌಷ್ಟಿಕ ಶಿಶುಗಳಂತಾದವು. ಚಂಚಲ ಮಳೆಯ ಜೊತೆಗೆ, ಮನುಷ್ಯರ ಹಸ್ತಕ್ಷೇಪವೂ ಹೆಚ್ಚಿ ನದಿಗಳಲ್ಲಿನ ಮರಳು ಸೂರೆಯಾಗತೊಡಗಿತು. ಮರಳು ಬಗೆದದ್ದರಿಂದಾಗಿ ಉಂಟಾದ ಗಾಯಗಳ ಜೊತೆಗೆ, ತ್ಯಾಜ್ಯ ಸುರಿಯುವ ತಿಪ್ಪೇಗುಂಡಿಯ ಸ್ವರೂಪವನ್ನೂ ಜಯಮಂಗಲಿ–ಪಿನಾಕಿನಿ ಪಡೆದುಕೊಂಡವು. ಇದೆಲ್ಲದರೊಂದಿಗೆ ಒತ್ತುವರಿಯ ಕಬಂಧ ಬಾಹುಗಳೂ ಸೇರಿಕೊಂಡು, ನದಿಗಳ ಅಸ್ತಿತ್ವವೇ ಕಳೆದುಹೋದಂತಾಗಿ ಅವೆರಡೂ ಹಿರೀಕರ ಸ್ಮೃತಿಗಳಲ್ಲಷ್ಟೇ ಜೀವಂತವಾಗಿದ್ದವು. ಆದರೆ, ಇತ್ತೀಚೆಗೆ ಸುರಿದ ಭಾರೀ ಮಳೆಯ ಜಾದೂವಿಗೆ ಜಯಮಂಗಲಿ–ಪಿನಾಕಿನಿ ಮೈದುಂಬಿಕೊಂಡಿವೆ. ಜಲವೈಭವ ಮರಳಿದೆ. ನದಿಗಳ ಈ ಮರುಹುಟ್ಟು ಎಷ್ಟು ಕಾಲ ಉಳಿಯಲಿದೆ ಎನ್ನುವುದು ಪ್ರಶ್ನೆಯಲ್ಲ, ಎಷ್ಟು ಕಾಲ ಉಳಿಸಿಕೊಳ್ಳಲಿದ್ದೇವೆ ಎನ್ನುವುದೇ ನಮ್ಮೆದುರಿಗಿರುವ ಸವಾಲು.